ಅ) ಪ್ರತಿ ವರ್ಷ ಲಭ್ಯವಿರುವ ಅನುದಾನ ಉಪಯೋಗಿಸಿ ಆನೆ ದಾಟದಂತಹ ಕಂದಕದಲ್ಲಿ ಧೂಳು ತುಂಬಿರುವ ಕಡೆಗಳಲ್ಲಿ ಹೂಳು ತೆಗೆಯುವ ಮತ್ತು ಹಳ್ಳಗಳಿಂದ ಕೂಡಿರುವ ಪ್ರದೇಶಗಳಲ್ಲಿ ಆನೆತಡೆಗೋಡೆ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಇ) ಹೌದು.

ಈ) ಮಾಡಿದೆ.

ಉ) ಆನೆ ದಾಟದಂತಹ ಕಂದಕಗಳ ನಿರ್ವಹಣೆಗೆ ರೂ. 10,00,000-00/- ನಿಗಧಿಪಡಿಸಲಾಗಿದೆ.

ಅರಣ್ಯ ಇಲಾಖೆಗೆ ಸೇರಿದೆಯೆಂದು ಸಾಗುವಳಿ ಜಮೀನುಗಳನ್ನು ವಶಪಡಿಸಿಕೊಳ್ಳುತ್ತಿರುವುದು

1197(710) ಶ್ರೀ ಹೆಚ್.ಸಿ. ಬಸವರಾಜು(ಪಿರಿಯಾಪಟ್ಟಣ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1978ಕ್ಕಿಂತಲೂ ಮುಂಚಿನಿಂದ ಸಾಗುವಳಿ ಮಾಡಿಕೊಂಡು ಜಮೀನಿನ ಸಾಗುವಳಿ ಪತ್ರವನ್ನು ಅಕ್ರಮ-ಸಕ್ರಮ ಪ್ರಾಧಿಕಾರದಿಂದ ಪಡೆದುಕೊಂಡು ಉಳುವೆ ಮಾಡುತ್ತಿರುವ ರೈತರ ಜಮೀನುಗಳನ್ನು ಇತ್ತೀಚೆಗೆ ಅರಣ್ಯ ಇಲಾಖೆಯವರು ಅರಣ್ಯ ಇಲಾಖೆಗೆ ಸೇರಿದ ಪ್ರದೇಶವೆಂದು ತಿಳಿಸಿ ಆ ಜಮೀನುಗಳನ್ನು ವಶಪಡಿಸಿಕೊಳ್ಳಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ರೈತರ ಜಮೀನಿನ ಹಿತರಕ್ಷಣೆಗೆ ಪೂರಕವಾದ ಯಾವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ?

ಇ) ಈ ಅರಣ್ಯ ಇಲಾಖೆಯದೆಂದು ಗುರುತಿಸಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು:(ಜಿಲ್ಲಾವಾರು:ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಇಂತಹ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಪಿರಿಯಾಣಪಟ್ಟಣದಲ್ಲಿರುವ ಮಲೆನಾಡು ಅಭಿವೃದ್ಧಿ ಮಂಡಳಿಯ ರಸ್ತೆ ಕಾಮಗಾರಿಗಳು

1198(711) ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ) : ಮಾನ್ಯ ಕಾನೂನು ಮತ್ತು ಎಂ.ಎ.ಡಿ.ಬಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಆರ್.ಐ.ಡಿ.ಎಫ್ 3ರಲ್ಲಿ ಕೊಪ್ಪ-ಎನ್.ಇ.ಆಯಿಲ್ ಪ್ಲಾಂಟೇಷನ್ ರಸ್ತೆ ಹಾಗೂ ಹಿಟ್ನಹೆಬ್ಬಾಗಿಲು-ಮಾಕೋಡು ರಸ್ತೆಗಳನ್ನು ಡಾಂಬರೀಕರಣಕ್ಕೆ ಆಯ್ಕೆ ಮಾಡಲಾಗಿದ್ದು, ಆದರೆ ಕಾಮಗಾರಿಯನ್ನು ಪ್ರಾರಂಭಿಸಿ ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕಾಮಗಾರಿಗಳನ್ನು ಪುನರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಎಷ್ಟು ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು;(ವಿವರ ನೀಡುವುದು)?